ಅಮೆರಿಕದ ಏಳು ಬಹು ದೊಡ್ಡ ನಗರಗಳಲ್ಲಿ ಟೆಕ್ಸಾಸ್ ರಾಜ್ಯದ ಸ್ಯಾನ್ ಎಂಟೋನಿಯೊ ಒಂದು. ನನ್ನ ಇತ್ತೀಚಿನ ಅಮೆರಿಕ ಪ್ರವಾಸದಲ್ಲಿ, ಅಮೆರಿಕದ ಸಾರ್ವಜನಿಕ ಗ್ರಂಥಾಲಯದ ಪ್ರೊಟ್ರೋಂಕೊ ಶಾಖೆಗೆ ಭೇಟಿ ಕೊಟ್ಟಿದ್ದೆ. ಸಮೃದ್ಧ ಗಾಳಿ–ಬೆಳಕು ಹಾಗೂ ಹವಾನಿಯಂತ್ರಣದಿಂದ ಕೂಡಿದ ಗ್ರಂಥಾಲಯವದು.

ಒಳಗೆ ಪ್ರವೇಶಿಸುತ್ತಿದ್ದಂತೆ ಸ್ವಯಂಚಾಲಿತ ಬಾಗಿಲುಗಳು ತನ್ನಷ್ಟಕ್ಕೆ ತೆರೆದುಕೊಂಡು ಬಾಗಿಲು ಮುಚ್ಚಿಕೊಳ್ಳುತ್ತವೆ. ಅಲ್ಲಿ ಎತ್ತರದ ವರ್ತುಲಾಕಾರದ ಮೇಜುಗಳ ಹಿಂದೆ ಗ್ರಂಥಾಲಯದ ವಿವಿಧ ಉದ್ಯೋಗಿಗಳು ಕುಳಿತಿರುತ್ತಾರೆ. ನಮಗೆ ಬೇಕಾದ ಪುಸ್ತಕ ಮತ್ತು ಅದರ ಲೇಖಕರ ಹೆಸರು ಹೇಳಿದಾಕ್ಷಣ ಕಂಪ್ಯೂಟರ್‌ನಲ್ಲಿ ಹುಡುಕಿ ಯಾವ ಪುಸ್ತಕಗಳ ಶೆಲ್ಫಿನಲ್ಲಿ ಅದು ಇದೆ ಎಂದು ಹೋಗಿ ಹುಡುಕಿ ತಂದುಕೊಡುತ್ತಾರೆ.

ಕುಳಿತುಕೊಳ್ಳಲು ಆರಾಮಾದ ಕುಶನ್ ಉಳ್ಳ ಆಸನ. ಎದುರಿಗೆ ತಗ್ಗಾಗಿರುವ ಟೀಪಾಯ್. ಟೀಪಾಯ್ ಮೇಲೆ ಪುಸ್ತಕ ಇಟ್ಟು ಓದಬಹುದು. ಅಥವಾ ಒರಗಿ ಓದಬಹುದು.

ಅಲ್ಲಿನ ಗ್ರಂಥಾಲಯದಲ್ಲಿ ಸಾಮಾನ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿನ ಎಲ್ಲ ಪ್ರಸಿದ್ಧ ಗ್ರಂಥಗಳು ಲಭ್ಯ. ಅಮೆರಿಕದ ನಾಗರಿಕ ಯುದ್ಧದ ಬಗೆಗಿನ ಅನೇಕ ಕಾದಂಬರಿಗಳು, ಐತಿಹಾಸಿಕ ಪುಸ್ತಕಗಳನ್ನು ಗಮನಿಸಿದೆ. ಗುಲಾಮಗಿರಿಯ ವಿರುದ್ಧ ಮತ್ತು ಪರವಿರುವ ರಾಜ್ಯಗಳ ನಡುವೆ ನಡೆದ ಆ ಯುದ್ಧ, ಅಮೆರಿಕನ್ ನಿಗ್ರೋಗಳ ದಾಸ್ಯವನ್ನು ಕೊನೆಗೊಳಿಸಿದ ಮಹತ್ವದ ಘಟನೆ. ಆಫ್ರೋ–ಅಮೆರಿಕನ್ ಸಮುದಾಯ ಅಬ್ರಹಾಂ ಲಿಂಕನ್ ಕಾಲದಲ್ಲಿ ಬಿಳಿಯರ ಗುಲಾಮಗಿರಿಯಿಂದ ಮುಕ್ತಗೊಂಡ ಕಥೆಯ ಅನೇಕ ಪುಸ್ತಕಗಳು ಗ್ರಂಥಾಲಯದಲ್ಲಿದ್ದವು.

ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳ ಪುಸ್ತಕಗಳು ಮನಸೆಳೆಯುವಂತಿದ್ದವು. ಸೈನ್ಸ್ ಫಿಕ್ಷನ್, ಕಾರ್ಟೂನ್, ಸಾಹಸದ ಕಥೆಗಳು, ವಿವಿಧ ಆಟೋಟಗಳ ಮಾಹಿತಿಗಳನ್ನು ಕೊಡುವ ಪುಸ್ತಕಗಳು – ಹೀಗೆ ಹಲವು ಬಗೆಯ ಉಪಯುಕ್ತವಾದ ಪುಸ್ತಕಗಳು ಅಲ್ಲಿದ್ದವು. ಲಭ್ಯ. ಆ ಪುಸ್ತಕಗಳ ಮುದ್ರಣದ ಗುಣಮಟ್ಟ ನಿಜಕ್ಕೂ ಮೆಚ್ಚತಕ್ಕಂತಹದು. ಮಕ್ಕಳ ಪುಸ್ತಕಗಳು ವರ್ಣರಂಜಿತ ಚಿತ್ರಗಳಿಂದ ತುಂಬಿ ಕ್ಯಾಲಿಕೊ ಪ್ರತಿಯಲ್ಲಿ ಪ್ರಕಟಗೊಳ್ಳುತ್ತವೆ. ನಮ್ಮಲ್ಲಿ ಅಂಥ ಗುಣಮಟ್ಟವನ್ನು ಕಲ್ಪಿಸಿಕೊಳ್ಳುವುದೂ ಕಷ್ಟ.

ಅಮೆರಿಕದ ಲೈಬ್ರರಿಗಳಲ್ಲಿ ವಿಡಿಯೊಗಳು, ಸಿ.ಡಿ.ಗಳು, ಆಡಿಯೊ ಪುಸ್ತಕಗಳು ಲಭ್ಯ. ಪುಸ್ತಕಗಳನ್ನು 21 ದಿನಗಳವರೆಗೆ ಇಟ್ಟುಕೊಂಡು ಮರಳಿಸಬೇಕು. ಇಲ್ಲದಿದ್ದರೆ ದಂಡ ಹಾಕಲಾಗುವುದು.

ಸ್ಥಳೀಯರಿಗೆ ಗ್ರಂಥಾಲಯವು ಒಂದು ಕಾರ್ಡ್ ಕೊಡುತ್ತದೆ. ಅದು ನಮ್ಮ ಕ್ರೆಡಿಟ್ ಕಾರ್ಡ್‌ನ ಹಾಗೆ ಇರುತ್ತದೆ. ಟೆಕ್ಸಾಸ್‌ನಲ್ಲಿ ಟೆಕ್ಸ್ ಶೇರ್ ಎಂಬ ಕಾರ್ಡ್ ಕೊಡಲಾಗುತ್ತದೆ. ಅದನ್ನು ಹೊಂದಿದವರು ಲೈಬ್ರರಿಯ ಶಾಶ್ವತ ಸದಸ್ಯರಾಗುತ್ತಾರೆ. ಅವರು ಪುಸ್ತಕಗಳನ್ನು, ಸಿ.ಡಿ.ಗಳನ್ನು ಕಡ ತೆಗೆದುಕೊಂಡು ಹೋಗಬಹುದು. ರಾಜ್ಯದ ಇತರೆಡೆಗಳಲ್ಲಿ ಇರುವ ಗ್ರಂಥಾಲಯಗಳಿಂದಲೂ ಪುಸ್ತಕಗಳನ್ನು ಪಡೆಯಬಹುದು.

ಲೈಬ್ರರಿಯಲ್ಲಿ ವೈಫೈ ಸವಲತ್ತು ಇರುತ್ತದೆ. ಅದಕ್ಕಾಗಿ ಒಂದು ಪ್ರತ್ಯೇಕವಾದ ಕೊಠಡಿ ಇದೆ. ಅದರ ಬಾಗಿಲನ್ನು ಮುಚ್ಚಿ ಕಂಪ್ಯೂಟರ್‌ನಲ್ಲಿ ತಮ್ಮ ಕೆಲಸ ಮಾಡಿಕೊಳ್ಳುತ್ತಾರೆ. ಹೆಡ್‌ಫೋನ್ ಕೂಡಾ ಲಭ್ಯ.

ಟೀನ್ ಏಜ್ ಮಕ್ಕಳಿಗೆ ಪ್ರತ್ಯೇಕವಾದ ಪುಸ್ತಕಗಳ ಶೆಲ್ಫ್ ಇರುತ್ತದೆ ಮತ್ತು ಅವರಿಗೆ ಪ್ರತ್ಯೇಕ ಸ್ಥಳ ಮೀಸಲಾಗಿರುತ್ತದೆ. 'ಟೀನ್ ಲೈಬರಿ' ವಿಭಾಗ ಅತ್ಯದ್ಭುತವಾಗಿದ್ದು, ಅಲ್ಲೊಂದು ಪ್ರಯೋಗಶಾಲೆ ಇದೆ.

ಪುಟ್ಟ ಪುಟ್ಟ ಮಕ್ಕಳು ವಿವಿಧ ವಸ್ತುಗಳಿಂದ ಹಿರಿಯರ ಮಾರ್ಗದರ್ಶನದಲ್ಲಿ ಕ್ರ್ಯಾಫ್ಟ್ ಕೆಲಸ ಮಾಡಿ ಆಡುವುದು ಅಮೆರಿಕದ ಗ್ರಂಥಾಲಯಗಳಲ್ಲಿ ಕಾಣಬಹುದಾದ ಸುಂದರ ದೃಶ್ಯ. ಶಾಲಾಮಕ್ಕಳಿಗೆ ತರಗತಿಗಳ ನಂತರ ಟ್ಯೂಶನ್ ವ್ಯವಸ್ಥೆಯೂ ಗ್ರಂಥಾಲಯದಲ್ಲಿದೆ. ಕೆಲವೆಡೆ ಕುರುಕಲು ತಿನಿಸುಗಳನ್ನು ಕೊಟ್ಟು ಮಕ್ಕಳ ಕಲಿಕೆಗೆ ಉತ್ತೇಜನ ನೀಡಲಾಗುತ್ತದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ಗ್ರಂಥಾಲಯಗಳು ಶಾಲೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಆ ಚಟುವಟಿಕೆಗಳು ಯಾವುವೆಂದರೆ:

- ಆನ್‌ಲೈನ್ ಮೂಲಕ ಟ್ಯೂಟರ್‌ಗಳು ಎಲಿಮೆಂಟರಿ, ಮಿಡ್ಲ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ, ಇಂಗ್ಲಿಷ್ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಸಹಾಯ ಮಾಡುವ ವ್ಯವಸ್ಥೆ ಇದೆ. ಅಭ್ಯಾಸ ಪಾಠಗಳು, ಸ್ಟಡಿ ಗೈಡ್ಸ್‌ಗಳು ಮತ್ತು ವಿಡಿಯೊಗಳು ದಿನದ ಯಾವುದೇ ವೇಳೆಯಲ್ಲಿ ಲಭ್ಯ.
- 'ಸ್ಯಾಟ್' ಮತ್ತು 'ಜಿಇಡಿ' ಪೂರ್ವ ತಯಾರಿ ಪುಸ್ತಕಗಳು ಅಂತರ್ಜಾಲದಲ್ಲಿ ಲಭ್ಯ.
- ಸಂಶೋಧಕರಿಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಉತ್ತಮ ಅಧ್ಯಯನ ಆಕರಗಳು ಲಭ್ಯ. ನಂಬಲರ್ಹ ಪ್ರಕಟಿತ ಮೂಲಗಳನ್ನು ಉಪಯೋಗಿಸಿ ಸಂಗ್ರಹಿಸಿದ್ದು ದಾಖಲೆಗಳು, ಡೇಟಾ ಬೇಸ್‌ಗಳ ಖಜಾನೆಯೇ ಗ್ರಂಥಾಲಯಗಳಲ್ಲಿರುತ್ತದೆ.
- 13ರಿಂದ 18 ವರ್ಷದ ಮಕ್ಕಳಿಗಾಗಿ ಎಲ್ಲ ಗ್ರಂಥಾಲಯಗಳಲ್ಲಿ ಪ್ರತಿ ವಾರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಈ ಚಟುವಟಿಕೆಗಳು ಕಲಿಕೆಯ ಜೊತೆಗೆ, ವಿವಿಧ ಕೌಶಲ್ಯಗಳನ್ನು ಅರಿಯಲು ಹಾಗೂ ಸ್ನೇಹ–ಸಂವಹನಕ್ಕೆ ಅವಕಾಶ ಕಲ್ಪಿಸುತ್ತವೆ.

### ಸ್ನೇಹ-ಸಜ್ಜನಿಕೆಯ ಅಧಿಕಾರಿಗಳು

ಅಮೆರಿಕದಲ್ಲಿನ ಗ್ರಂಥಾಲಯಗಳಲ್ಲಿನ ಅಧಿಕಾರಿಗಳು ಮಾಹಿತಿಯ ಸಾಗರವಿದ್ದಂತೆ. ಅವರು ಪುಸ್ತಕಗಳನ್ನು ಹುಡುಕಲು ನೆರವಾಗಬಲ್ಲರಲ್ಲದೆ, ಐತಿಹಾಸಿಕ ಘಟನೆಗಳ ಕುರಿತು ಮಾಹಿತಿ ಕೊಡಬಲ್ಲರು. ಕ್ಲಿಷ್ಟ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡು ಹಿಡಿಯಬಲ್ಲರು.



### ಬರಹಗಾರರ ಚುಂಬಕ

'ರೈಟರ್ಸ್ ಕ್ಲಬ್' ಅಮೆರಿಕದ ಗ್ರಂಥಾಲಯಗಳ ಅವಿಭಾಜ್ಯ ಅಂಗ. ಪ್ರತಿ ಲೈಬ್ರರಿ ಶಾಖೆಯಲ್ಲಿ ಲೇಖಕರಿಗೆ, ಚಿಂತಕರಿಗೆ ಸಭೆ ಸೇರಲು ಒಂದು ಸುಸಜ್ಜಿತ ರೂಮ್ ಇರುತ್ತದೆ. ಅಲ್ಲಿ ತಿಂಗಳ ಎರಡನೇ ಮತ್ತು ಕೊನೆಯ ಗುರುವಾರ ಸಂಜೆ 6ರಿಂದ 8ರವರೆಗೆ 'ರೈಟರ್ಸ್ ಕ್ಲಬ್' ಸದಸ್ಯರ ಸಭೆ ಸೇರುತ್ತದೆ. ಲೇಖಕರು ತಮ್ಮ ಕೃತಿಯನ್ನು ಓದುತ್ತಾರೆ. ಆ ಬರವಣಿಗೆ–ಓದಿಗೆ ಪ್ರತಿಕ್ರಿಯೆಗಳು ದೊರೆಯುತ್ತವೆ. ಬರಹಗಾರರ ಪಾಲಿಗೆ ಈ ಕ್ಲಬ್‌ಗಳು ಹೊಸ ಉತ್ಸಾಹ ತುಂಬುವ ಸಾಹಿತ್ಯದ ಕಮ್ಮಟಗಳಿದ್ದಂತೆ.



'ರೈಟರ್ಸ್ ಕ್ಲಬ್'ನಲ್ಲಿ ನೆರೆದಿರುವ ಲೇಖಕರು